# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006.

ಆಡಳಿತ ವಿಭಾಗ


ಸಂಖ್ಯೆ:ಕರಾಮುವಿ/ಆವಿ/ಜಿಎಲ್–4/50/2024–25. ದಿನಾಂಕ: 07–08–2024

## ಅಧಿಸೂಚನೆ

ವಿಷಯ: ವಿ.ವಿ. ನಿಲಯದಲ್ಲಿ ನಡೆಯುವ ಸಭೆ–ಸಮಾರಂಭಗಳ ಆಯೋಜನೆ ಸಂಬಂಧ ಟೀ/ಕಾಫಿ, ಸಿಹಿ ತಿಂಡಿ/ಲಘು ಉಪಾಹಾರ/ಉಪಾಹಾರ ಇತ್ಯಾದಿಗಳಿಗೆ ತಗುಲುವ ಅತಿಥ್ಯೋಪಚಾರದ ವೆಚ್ಚವನ್ನು ದರ ಒಪ್ಪಂದ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗುತ್ತಿರುವ ಟೆಂಡರ್‌ನ ದಾಖಲೆಗಳನ್ನು ಪರಿಶೀಲಿಸಲು ಟೆಂಡರ್ ಮೌಲ್ಯಮಾಪನ ಸಮಿತಿ (Tender evaluation Committee) ರಚಿಸುವ ಬಗೆಗೆ.

ಉಲ್ಲೇಖ:
1. ಕುಲಸಚಿವರ ಪತ್ರ ದಿನಾಂಕ: 07.06.2024.
2. 178ನೇ ಬಿ.ಓ.ಎಂ ಸಭೆಯ ಅನುಮೋದನೆ ದಿನಾಂಕ: 18.06.2024.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 26.07.2024.

* * * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದಲ್ಲಿ ಆಗಿಂದಾಗ್ಗೆ ಹಲವಾರು ಸಭೆ–ಸಮಾರಂಭಗಳು, ರಾಷ್ಟ್ರೀಯ ಹಬ್ಬಗಳು, ಸಮ್ಮೇಳನಗಳು, ಕಾರ್ಯಗಾರಗಳು, ಘಟಿಕೋತ್ಸವಗಳು, ವಿವಿಧ ಪೀಠಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು ಇತ್ಯಾದಿ ಶೈಕ್ಷಣಿಕ ಚಟುವಟಿಕೆಗಳು ವಿವಿಧ ವಿಭಾಗಗಳ ವತಿಯಿಂದ ಆಯೋಜನೆಗೊಳ್ಳುತ್ತಿದ್ದು, ಸದರಿ ಕಾರ್ಯಕ್ರಮಗಳಲ್ಲಿ ಗಣ್ಯ ವ್ಯಕ್ತಿಗಳು, ವಿ.ವಿ.ನಿಲಯದ ಅಧಿಕಾರಿ ವರ್ಗದವರುಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರುಗಳು ಭಾಗವಹಿಸುತ್ತಾರೆ. ಈ ಹಿನ್ನೆಲೆಯಲ್ಲಿ ಮೇಲೆ ತಿಳಿಸಿರುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ವ್ಯಕ್ತಿಗಳಿಗೆ ಅತಿಥ್ಯೋಪಚಾರದ ಅಂಗವಾಗಿ ಟಿ/ಕಾಫಿ, ಲಘು ಉಪಾಹಾರ, ಉಪಾಹಾರ, ಸಿಹಿ ತಿಂಡಿಗಳ ವಿತರಣೆ ಹಾಗೂ ಇತ್ಯಾದಿಗಳ ಖರ್ಚು–ವೆಚ್ಚಗಳನ್ನು ವಿ.ವಿ.ನಿಲಯವು ಭರಿಸಬೇಕಾಗಿರುತ್ತದೆ.

ವಿ.ವಿ.ನಿಲಯದಲ್ಲಿ ಮುಂದಿನ ದಿನಗಳಲ್ಲಿ ಆಯೋಜಿಸಲ್ಪಡುವ ಎಲ್ಲಾ ರೀತಿಯ ಶೈಕ್ಷಣಿಕ ಚಟುವಟಿಕೆ ಕಾರ್ಯಕ್ರಮಗಳ ಅತಿಥ್ಯೋಪಚಾರದ ವೆಚ್ಚವನ್ನು ಸರಿದೂಗಿಸುವ ಉದ್ದೇಶದಿಂದ ಯಾವುದಾದರೂ ಒಂದು ಆಹಾರ ತಯಾರಿಕೆ ಉದ್ದಿಮೆ/ಗುತ್ತಿಗೆದಾರರನ್ನು ಗುರುತಿಸಿ, ದರ ಒಪ್ಪಂದ (ರೇಟ್ ಕಾಂಟ್ರಾಕ್ಟ್) ಮಾಡಿಕೊಳ್ಳುವ ಹಾಗೂ ಕೆಟಿಪಿಪಿ ನಿಯಮಾನುಸಾರ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಟೆಂಡರ್‌ನ ದಾಖಲಾತಿಗಳ ಕರಡು ಪ್ರತಿ, ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ದಾಖಲೆಗಳನ್ನು ಪರಿಶೀಲಿಸಿ ಅಂತಿಮಗೊಳಿಸಲು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಟೆಂಡರ್ ಮೌಲ್ಯಮಾಪನ ಸಮಿತಿ (Tender evaluation Committee)ಯನ್ನು ರಚಿಸಿ ಅಧಿಸೂಚಿಸಲಾಗಿದೆ.

| ಕ್ರ.ಸಂ | ಅಧ್ಯಕ್ಷರು & ಸದಸ್ಯರುಗಳ ಹೆಸರು | |
|---|---|---|
| 1. | ಕುಲಸಚಿವರು, ಕರಾಮುವಿ, ಮೈಸೂರು. | ಅಧ್ಯಕ್ಷರು |
| 2. | ಡೀನ್ (ಶೈಕ್ಷಣಿಕ), ಕರಾಮುವಿ, ಮೈಸೂರು. | ಸದಸ್ಯರು |
| 3. | ಡೀನ್ (ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು. | ಸದಸ್ಯರು |
| 4. | ನಿರ್ದೇಶಕರು (CIQA), ಕರಾಮುವಿ, ಮೈಸೂರು. | ಸದಸ್ಯರು |
| 5. | ಉಪಕುಲಸಚಿವರು (ಸಾಮಾನ್ಯ) ಕರಾಮುವಿ, ಮೈಸೂರು. | ಸಂಚಾಲಕರು |

ಆದೇಶದ ಮೇರೆಗೆ,

07/08/24

ಕುಲಸಚಿವ

ಗೆ,

ಸಮಿತಿ ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರುಗಳಿಗೆ.

ಪ್ರತಿ,
1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕರಾಮುವಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಡಾ. ನವೀನ್ ಕುಮಾರ್ ಸಿ.ಜಿ, ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ, ಮೈಸೂರು, ಇವರಿಗೆ ಈ ಅಧಿಸೂಚನೆಯನ್ನು ವಿ.ವಿ ನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
4. ಕಛೇರಿ ಪ್ರತಿ.